

## ನಲ್ವತ್ತೆಂಟು

ಖಾಸಗಿ ಸಂಸ್ಥೆಯೊಂದರಲ್ಲಿ ಖಾಲಿ ಇದ್ದ ಕೆಲಸಕ್ಕೆಂದು ಗುಂಡ ಸಂದರ್ಶನಕ್ಕೆ ಹೋಗಿದ್ದ. ಬಂದ ಎಲ್ಲ ಅಭ್ಯರ್ಥಿಗಳ ಸಂದರ್ಶನವಾದ ಬಳಿಕ ಗುಂಡನ ಸರದಿಯೂ ಬಂತು.

ಆ ಸಂಸ್ಥೆಯ ಮುಖ್ಯಸ್ಥರು ಗುಂಡನಿಗೆ ಒಂದು ಪ್ರಶ್ನೆ ಕೇಳಿದರು: 'ನೂರಡಿ ರಸ್ತೆಯಲ್ಲಿ ಹದಿನೈದು ಅಡಿ ಉದ್ದ, ಏಳು ಅಡಿ ಅಗಲದ ಆನೆಯೊಂದು ಹೋಗುತ್ತಿದೆ, ಹಾಗಾದರೆ ನನ್ನ ವಯಸ್ಸೆಷ್ಟು?'

ಗುಂಡ ತಕ್ಷಣ, 'ನಲ್ವತ್ತೆಂಟು ಸಾರ್' ಎಂದ.

'ಅರೆ, ನನ್ನ ವಯಸ್ಸು ನಲ್ವತ್ತೆಂಟು! ಹೇಗೆ ಕಂಡುಹಿಡಿದೆ?'

ಅದಕ್ಕೆ ಗುಂಡ, 'ನಮ್ಮೂರಿನಲ್ಲಿ ಒಬ್ಬ ಅರೆ ಹುಚ್ಚ ಇದ್ದಾನೆ. ಅವನ ವಯಸ್ಸು ಇಪ್ಪತ್ನಾಲ್ಕು ಸಾರ್' ಎಂದ!

**ಶಂಕರೇಗೌಡ**

## ಪರ್ಸನಲ್ ಮಾತು

ಪಕ್ಕದ ಮನೆ ಕಮಲಮ್ಮ, ಪಂಕಜಾಳ ಮನೆಗೆ ಬಂದರು. ಬಂದವರು ತಮ್ಮ ವ್ಯಾನಿಟಿ ಬ್ಯಾಗನ್ನು ಅಲ್ಲಿನ ಟೇಬಲ್ಲಿನ ಮೇಲಿಟ್ಟು, 'ಪಂಕಜಾ, ನಿನ್ನ ಹತ್ತಿರ ಪರ್ಸನಲ್ಆಗಿ ಮಾತನಾಡೋದಿದೆ' ಎಂದು ಹೇಳಿ ಪಂಕಜಾಳನ್ನು ಮನೆಯ ಒಳಗೆ ಕರೆದೊಯ್ದರು. ಅವರಿಬ್ಬರು ಗುಟ್ಟಾಗಿ ಮಾತನಾಡುತ್ತಿರುವಾಗ ಪಂಕಜಾಳ ಪುಟ್ಟ ಮಗ ಅವರಿಬ್ಬರಿದ್ದಲ್ಲಿಗೆ ಹೋಗಿ, 'ಕಮಲಮ್ಮಾ, ನೀವು ಪರ್ಸನಲ್ಆಗಿ ಮಾತನಾಡಬೇಕು ಎಂದು ಹೇಳಿ ಪರ್ಸ್ ಹೊರಗೇ ಬಿಟ್ಟು ಬಂದಿದ್ದೀರಲ್ಲ. ತಗೊಳ್ಳಿ ಪರ್ಸ್. ಇದರಲ್ಲಿ ಮಾತನಾಡಿ' ಎಂದು ಹೊರಗೆ ಟೇಬಲ್ ಮೇಲಿಟ್ಟ ಕಮಲಮ್ಮಳ ವ್ಯಾನಿಟಿ ಬ್ಯಾಗನ್ನು ಅವರ ಕೈಗಿಟ್ಟ!

**ದೇವಿದಾಸ ಸುವರ್ಣ**

ಚಿತ್ರಗಳು: ಗಣೇಶ ಆಚಾರ್ಯ

